ಇ. ಇಲಾಖೆಗೆ ಒದಗಿಸಲಾಗಿರುವ ಅನುದಾನವನ್ನು ಪರಿಗಣಿಸಿ ಹೆಚ್ಚುವರಿ ಅನುದಾನ ನೀಡಲು ಕ್ರಮಕೈಗೊಳ್ಳಲಾಗುವುದು.

ಈ. ಹಂತಹಂತವಾಗಿ ಯೋಜನೆಯನ್ನು ಮುಗಿಸಿ ರೈತರಿಗೆ ನೀರನ್ನು ಒದಗಿಸಿಕೊಡಲಾಗುತ್ತಿದೆ.

ಹೇಮಾವತಿ ಮುಖ್ಯ ಕಾಲುವೆಯಿಂದ ಸಂಪಿಗೆ ಕೆರೆಗೆ ನೀರು ಬಿಡಲು ತೂಬು ಇಡುವುದು

1861(2305): ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗುಬ್ಬಿ ಡಿವಿಜನ್‌ಗೆ ಸೇರಿದ 61ನೇ ಕಿ.ಮೀ.ನಲ್ಲಿ ಯಲದಬಾಗಿ ಗ್ರಾಮದ ಬಳಿ ಹೇಮಾವತಿ ಮುಖ್ಯ ಕಾಲುವೆಯಿಂದ ಸಂಪಿಗೆ ಕೆರೆಗೆ ನೀರು ಹೋಗಲು ತೂಬು ಇಡಲು ಜನರಿಂದ ಒತ್ತಡ ಬಂದಿದೆಯೇ;

ಆ. ಹಾಗಿದ್ದಲ್ಲಿ, ಯಾವಾಗ ಈ ತೂಬು ಇಡಲಾಗುವುದು; ಈ ವರ್ಷದ ಆಯವ್ಯಯದಲ್ಲಿ ಇದಕ್ಕಾಗಿ ಹಣಕಾಸಿನ ಅವಕಾಶ ಕಲ್ಪಿಸಲಾಗುವುದೆ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ. ಇಲ್ಲ

ಆ. ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕಿಬ್ಬನ ಹಟ್ಟಿ ಸಬ್ ಡಿವಿಜನ್‌ಗೆ ಸೇರಿದ D - 9 ಮತ್ತು D-10 ರಲ್ಲಿ ತೂಬು ಇಡುವುದು

1862(2306): ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕಿಬ್ಬನಹಳ್ಳಿಗೆ ಸೇರಿದ ಸಬ್ ಡಿವಿಜನ್‌ಗೆ ಬರುವ ಡಿ-9 ಹಾಗೂ ಡಿ-10 ರ ಮಧ್ಯೆ (ಹೆಗ್ಗೆರೆ ಬಳಿ) ತೂಬು ನಿರ್ಮಾಣಕ್ಕೆ ಜನರಿಂದ ಒತ್ತಡ ಬಂದಿದೆಯೇ;

ಆ. ಈ ತೂಬು ನಿರ್ಮಾಣದಿಂದ ಬಹಳಷ್ಟು ರೈತರಿಗೆ ಅನುಕೂಲ ಆಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ ಯಾವಾಗ ತೂಬು ನಿರ್ಮಾಣ ಮಾಡಲಾಗುವುದು;

ಈ. ಈ ವರ್ಷ ಮಾಡಲಾಗುವುದೇ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ. ಹೌದು.

ಆ. ವಿತರಣಾ ನಾಲೆ 9(ಎ) ವ್ಯಾಪ್ತಿಯಲ್ಲಿ ಹೆಗ್ಗೆರೆ ಗ್ರಾಮದ ಜಮೀನುಗಳಿಗೆ ನೀರೊದಗಿಸಲಾಗುತ್ತದೆ. ಉಳಿಕೆ ಹೆಗ್ಗೆರೆ ಗ್ರಾಮದ ಜಮೀನು ತುಮಕೂರು ಶಾಖಾ ನಾಲೆಯ ತಳಮಟ್ಟ (ಸಿ.ಬಿ.ಎಲ್) ಕ್ಕಿಂತ ಎತ್ತರದಲ್ಲಿದೆ. ನಾಲೆಗಳಲ್ಲಿ ಸ್ವಾಭಾವಿಕವಾಗಿ ನೀರು ಹರಿಸಿ (ಗ್ರಾವಿಟಿ ಫ್ಲೊ) ವಿತರಣಾ ನಾಲೆಗಳ ಮುಖಾಂತರ ಜಮೀನುಗಳಿಗೆ ನೀರನ್ನು ಒದಗಿಸಬೇಕಾಗಿರುವ ಕಾರಣ. ನಾಲಾ ತಳಮಟ್ಟಕ್ಕಿಂತ ಎತ್ತದಲ್ಲಿರುವ ಹೆಗ್ಗೆರೆ ಗ್ರಾಮದ ಉಳಿಕೆ ಜಮೀನಿಗೆ, ವಿತರಣಾ ನಾಲೆಗೆ ಸೆಚ್ಚುವರಿ ತೂಬು ನಿರ್ಮಿಸಿ ನೀರನ್ನು ಒದಗಿಸುವುದು ತಾಂತ್ರಿಕವಾಗಿ

ಕಾರ್ಯಗತಗೊಳಿಸುವುದು ಕಷ್ಟ ಸಾಧ್ಯವಾಗುತ್ತಿದೆ. ಆದರೂ ಹೆಚ್ಚುವರಿ ತೂಬಿನ ಸಾಧ್ಯ ಸಾಧ್ಯತೆಗಳನ್ನು ತನಿಖೆ ಮಾಡಿಸಿ ನೀರೊದಗಿಸುವ ಬಗ್ಗೆ ಪರಿಶೀಲಿಸಲಾಗುವುದು.

ಇ. ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ತುರುವೇಕೆರೆ ತಾಲ್ಲೂಕು ಕಡೇಹಳ್ಳಿ ಗ್ರಾಮದ ನ್ಯಾಯಬೆಲೆ ಅಂಗಡಿ ಅವ್ಯವಹಾರ

1863(2307): ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ತುರುವೇಕೆರೆ ತಾಲ್ಲುಕು ದಬ್ಬೇಗಟ್ಟ ಹೋಬಳಿ ಕಡೇಹಳ್ಳಿ ಗ್ರಾಮದಲ್ಲಿ ನ್ಯಾಯ ಬೆಲೆ ಅಂಗಡಿ ಎಷ್ಟು ವರ್ಷದಿಂದ ನಡೆಯುತ್ತಿದೆ;

ಆ. ಅನೇಕ ವರ್ಷಗಳಿಂದ ಆ ಗ್ರಾಮದ ಮತ್ತು ಸುತ್ತಮುತ್ತ ಗ್ರಾಮದ ಜನರಿಗೆ ನ್ಯಾಯ ಬೆಲೆ ಅಂಗಡಿಯವರು ಎಲ್ಲಾ ರೀತಿಯಲ್ಲಿ ವಂಚನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಅಕ್ಕಿ ಹಾಗೂ ಸೀಮೆಎಣ್ಣೆಯನ್ನು ಜನರಿಗೆ ಕೊಡದೇ ಕಾಳಸಂತೆಯಲ್ಲಿ ಮಾರಿರುವುದು ನಿಜವೇ?

ಈ. ಹಾಗಿದ್ದಲ್ಲಿ, ಈ ನ್ಯಾಯಬೆಲೆ ಅಂಗಡಿಯ ಮಾಲೀಕರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ?

ಉ. ತಕ್ಷಣ ಬೇರೆ ವ್ಯವಸ್ಥೆಯ ಮೂಲಕ ಆ ಗ್ರಾಮದ ಜನರಿಗೆ ರೇಷನ್ ಕೊಡಲಾಗುವುದೇ?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ. 11 ವರ್ಷಗಳಿಂದ

ಆ. ಅವ್ಯವಹಾರದ ವಿಷಯವು ಪರಿಶೀಲನೆಯಲ್ಲಿದೆ.

ಇ. ಪರಿಶೀಲನೆಯಲ್ಲಿದೆ

ಈ. ಜಿಲ್ಲಾಧಿಕಾರಿಗಳು ದಿ: 21.12.01 ರಂದು ವಿಚಾರಣೆಯನ್ನು ಕಾಯ್ದಿರಿಸಿ ನ್ಯಾಯಬೆಲೆ ಅಂಗಡಿ ಪ್ರಾಧಿಕಾರವನ್ನು ಅಮಾನತ್ತು ಪಡಿಸಿರುತ್ತಾರೆ. ರಿವಿಜನ ಅರ್ಜಿಯ ಆಧಾರದ ಮೇಲೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಜಿಲ್ಲಾಧಿಕಾರಿಗಳ ಆದೇಶಕ್ಕೆ ದಿ: 6.4.02 ರಂದು ತಡೆಯಾಜ್ಞೆಯನ್ನು ನೀಡಿ ವಿಚಾರಣೆಯನ್ನು ಮುಂದುವರೆಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆಗಳನ್ನು ನೀಡಿರುತ್ತಾರೆ.

ಉ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಬರಗಾಲವಿರುವಾಗ ಸಹಕಾರ ಬ್ಯಾಂಕುಗಳ ಸಾಲ ವಸೂಲಾತಿ ನಿಲ್ಲಿಸುವುದು

1864(2308): ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಕಳೆದ 2 ವರ್ಷದಿಂದ ಬರಗಾಲದಿಂದ ರೈತರು ತತ್ತರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?